೨ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

## ಸಿ.ಸಿ. 410/2022

ಸಾಕ್ಷಿದಾರರ ಹೇಳಿಕೆ ಃ

| | | |
|---|---|---|
| ಹೆಸರು | ಃ ರವಿ | ಚಾಸಾಃ **5** ಪ್ರಾಸಾಃ **5** |
| ತಂದೆಯ ಹೆಸರು | ಃ ಕೆಂಪೇಗೌಡ | |
| ವಯಸ್ಸು | ಃ 33 ವರ್ಷ | |
| ವೃತ್ತಿ | ಃ ಬಿಲ್ ಕಲೆಕ್ಟರ್ | |
| ವಾಸಸ್ಥಳ | ಃ ದೊಡ್ಡಬ್ಯಾಡರಹಳ್ಳಿ ಗ್ರಾಮ | |

ದಿನಾಂಕಃ **18.08.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01.** ದಿಃ16.09.2021 ರಂದು ದೊಡ್ಡಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಟ್ಯಾಂಕ್ ನಿರ್ಮಿಸಲು ಜೆ.ಸಿ.ಬಿ. ಸಮೇತ ನಾನು, ಪಿ.ಡಿ.ಒ., ತಹಶೀಲ್ದಾರ್, ಇ.ಒ. ರವರು ಹೋಗಿದ್ದೆವು. ಆ ದಿನ ಸರ್ವೇಯರ್ ಸರ್ವೇ ನಂ-56 ಮತ್ತು 57 ರಲ್ಲಿ ಕಲ್ಲು ಗುರುತಿಸಿ ನೆಟ್ಟಿದ್ದರು. ಮಾರನೇ ದಿನ ಸರ್ವೆ ನಂ-56 ಮತ್ತು 57 ರಲ್ಲಿ ನೆಟ್ಟಿದ್ದ ಕಲ್ಲನ್ನು ಲಿಂಗರಾಜು ಮತ್ತು ದೇವರಾಜುರವರು ಕಿತ್ತು ಹಾಕಿದ್ದರು. ಸದರಿ ವಿಚಾರವನ್ನು ಪಿ.ಡಿ.ಒ.ರವರಿಗೆ ತಿಳಿಸಿದೆ. ದಿಃ17.09.2021 ರಂದು ಪಂಚಾಯಿತಿ ಮುಂದೆ ಆರೋಪಿ-1 ರಿಂದ 3 ರವರು ಬಂದು ಗಲಾಟೆ

ಮಾಡಿದರು. ಪಂಚಾಯಿತಿಯ ಕಾರ್ಯಾದರ್ಶಿಯವರು ಕಛೇರಿಯ ಒಳಗೆ ಇದ್ದರು. ಪಿ.ಡಿ.ಒ. ರವರಿಗೆ ನಾನು ವಿಷಯ ತಿಳಿಸಿದೆ. ಅವರು ದೂರನ್ನು ಕೊಟ್ಟರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ-2 ಮತ್ತು 4 ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಅವರ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ನುಡಿದಿರುತ್ತಾರೆ. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಡಿ.ಆರ್.ಕೆ.ರವರಿಂದ ಃ</u>

**01**. ಜೆ.ಸಿ.ಬಿ. ನಂಬರ್ ಗೊತ್ತಿಲ್ಲ. ಅದರ ಮಾಲೀಕರ ಹೆಸರು ಚಂದನ್. ದಿಃ16.09.2021 ರಂದು ಸರ್ವೇಯರ್ ಅಳತೆ ಮಾಡಲು ಬಂದಿದ್ದರು. ಜೆ.ಸಿ.ಬಿ. ಮೂಲಕ ಗುಂಡಿ ತೆಗೆಯಲಿಲ್ಲ. ನಾನು ಪಂಚಾಯಿತಿಯಲ್ಲಿ ವಾಟರ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದು, ನಿಗದಿತ ಸಮಯ ಇಲ್ಲ. ಸ್ಥಳಕ್ಕೆ ಪಿ.ಡಿ.ಒ. ರವರು ಹೋಗಲು ನನಗೆ ತಿಳಿಸಿದ್ದರು. ಸರ್ವೇ ನಂ-56 ಮತ್ತು 57 ಜಯರಾಮು ಎಂಬುವವರಿಗೆ ಸೇರಿದ್ದು. ತಹಶೀಲ್ದಾರ್ ರವರು ಮತ್ತು ಇ.ಒ. ರವರು ಬಂದಿದ್ದ ಸರ್ಕಾರಿ ಜಾಗದ ನಂಬರ್ ನನಗೆ ಗೊತ್ತಿಲ್ಲ. ಅಳತೆ ಮಾಡಿದಾಗ ನೆಟ್ಟ ಕಲ್ಲಿಗೆ ನಾನೇ ಕೆಂಪು ಬಣ್ಣ ಹಚ್ಚಿದ್ದೆ. ನಾನು ಸ್ಥಳಕ್ಕೆ ಹೊದಾಗ ಸದರಿ ಕಲ್ಲು ಇರಲಿಲ್ಲ. "ಆ ನಂತರ ಅದೇ ದಿನ ರಾತ್ರಿ ಸುಮಾರು **8.00** ಗಂಟೆ ಸಮಯದಲ್ಲಿ ನಾನು ಮತ್ತು ಮರಿಗೌಡರು ವಾಟರ್ ಟ್ಯಾಂಕ್ ನಿರ್ಮಾಣ ಮಾಡಲು ಪೂಜೆ ಮಾಡಿದ್ದ ಸ್ಥಳದಲ್ಲಿ ಇರುವಾಗ ಮೇಲ್ಕಂಡ ಜಯರಾಮುರವರ ಮಗ ಲಿಂಗರಾಜು**,** ದೇವರಾಜು ಹಾಗೂ ನಿಂಗೇಗೌಡರ ಮಗ ಪ್ರಕಾಶ್ ಎಂಬುವವರು ತಹಶೀಲ್ದಾರ್ ರವರು ಭೂ**-**ಮಾಪಕರಿಂದ ನೆಡಿಸಿದ್ದ ಹದ್ದುಬಸ್ತು ಕಲ್ಲುಗಳನ್ನು ಕಿತ್ತುಹಾಕಿದರು ಇದನ್ನು ನೋಡಿದ ನಾವು ಪಿ.ಡಿ**.**ಒ**.** ರವರಿಗೆ ವಿಚಾರ ತಿಳಿಸಿರುತ್ತೇವೆ" ಎಂದು ದಿಃ21.09.2021 ರಂದು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಡಿ**-1** ಎಂದು ಗುರುತಿಸಿಸಲಾಯಿತು. ಆರೋಪಿಗಳು ಯಾವುದೇ ಕೃತ್ಯವೆಸಗದಿದ್ದರು, ಅವರ ವಿರುದ್ದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**02**. ದಿ:17.09.2021 ರಂದು ಆರೋಪಿಗಳು ನಮ್ಮ ಪಂಚಾಯಿತಿ ಮುಂದು ಗಲಾಟೆ ಮಾಡಿದರು ಎಂದು ಹೇಳಿದ್ದು, ಪಂಚಾಯಿತಿಯಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ ಎಂದರೆ ಸರಿ. ಪಂಚಾಯಿತಿ ಮುಂದೆ 10-12 ಜನ ಸೇರಿದ್ದರು. ಅವರೆಲ್ಲ ಪಂಚಾಯಿತಿ ಮುಂದೆ ಧರಣಿ ಕುಳಿತಿದ್ದರು. ಪಂಚಾಯಿತಿ ಮುಂದೆ ಇದ್ದ 10-12 ಜನರ ಹೆಸರು ಆರೋಪಿಗಳನ್ನು ಹೊರತುಪಡಿಸಿ ಹೇಳಲು ಗೊತ್ತಿಲ್ಲ. ಉಳಿದ ಜನರ ವಿರುದ್ದ ದೂರನ್ನು ಕೊಟ್ಟಿಲ್ಲ. 5 ನೇ ಆರೋಪಿಯು 2021 ನೇ ಸಾಲಿನಿಂದ ಇಲ್ಲಿಯವರೆಗೂ ಗ್ರಾಮ ಪಂಚಾಯಿತಿ ಸದಸ್ಯನಾಗೇ ಇದ್ದಾರೆ ಎಂದರೆ ಸರಿ. ಸರ್ವೆ ನಂ-56 ಮತ್ತು 57 ನ್ನು ಅಳತೆ ಮಾಡಲು 5 ನೇ ಆರೋಪಿಯು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ಆ ಕಾರಣ ಅವರನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು, ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**)**

ಓ. ಹೇ. ಕೇ. ಸ. ಇದೆ.

**C/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.